KACB600001292017

# ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಶಿಡ್ಲಘಟ್ಟ

**ಇಂದು ದಿನಾಂಕಃ 30 ನೇ ತಾರೀಖು ಜುಲೈ, 2026**

-ಉಪಸ್ಥಿತರು-

ಶ್ರೀಮತಿ. ಸುಕನ್ಯ ಸಿ.ಎಸ್ , ಬಿ .ಎ. ಎಲ್.ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,
ಶಿಡ್ಲಘಟ್ಟ.

**ಸಿ.ಸಿ. ಸಂಖ್ಯೆ- 37/2017**

ಫಿರ್ಯಾದಿದಾರರು : ಸರ್ಕಾರದ ಪರವಾಗಿ ಆರಕ್ಷಕ ಉಪನೀರೀಕ್ಷಕರು,
ಶಿಡ್ಲಘಟ್ಟ ಗ್ರಾಮಾಂತರ ಪೋಲೀಸ್ ಠಾಣೆ.

(ಪ್ರತಿನಿಧಿಸುವವರು -ಸಹಾಯಾಕ ಸರ್ಕಾರಿ ಅಭಿಯೋಜಕರು)

ವಿರುದ್ಧ

ಆರೋಪಿತರು : ನಾರಾಯಣಸ್ವಾಮಿ
ಬಿನ್ ಲೇಟ್ ಕೃಷ್ಣಪ್ಪ,
ಸುಮಾರು 36 ವರ್ಷ ವಯಸ್ಸು,
ವಾಸಃ ಜಪ್ತಿಹೊಸಹಳ್ಳಿ ಗ್ರಾಮ,
ಶಿಡ್ಲಘಟ್ಟ ತಾಲ್ಲೂಕು.
ಚಿಕ್ಕಬಳ್ಳಾಪುರ ಜಿಲ್ಲೆ.

(ಪ್ರತಿನಿಧಿಸಿದವರು ಶ್ರೀ.ಎಂ.ಪಾಪಿರೆಡ್ಡಿ -ವಕೀಲರು)

ಘಟನೆಯ ವಿವರಗಳುಃ

| | | | |
|---|---|---|---|
| 1. | ಆಪಾದನೆ ದಿನಾಂಕ | - | 14/15-03-2016 |
| 2. | ಆಪಾದನೆ ವರದಿಯಾದ ದಿನಾಂಕ | - | 15.03.20165 |
| 3. | ಫಿರ್ಯಾದುದಾರರ ಹೆಸರು | - | ಮುನಿರಾಜಪ್ಪ |
| 4. | ಸಾಕ್ಷಿದಾರರ ವಿಚಾರಣೆ ಪ್ರಾರಂಭವಾದ ದಿನಾಂಕ | - | 18.09.2019 |

5. ಸಾಕ್ಷಿದಾರರ ವಿಚಾರಣೆ ಮುಕ್ತಾಯವಾದ ದಿನಾಂಕ - 07.03.2025

6. ಅಪಾದಿಸಲ್ಪಟ್ಟ ಅಪಾದನೆಗಳು - ಭಾರತೀಯ ದಂಡ ಸಂಹಿತೆ ಕಲಂ. 324, 326, 504 ರಂತೆ.

7. ನ್ಯಾಯಾಧೀಶರ ಅಭಿಪ್ರಾಯ - ಆರೋಪಿ ನಿರ್ದೋಷಿ.

## ತೀರ್ಪು

ಶಿಡ್ಲಘಟ್ಟ ಗ್ರಾಮಾಂತರ ಠಾಣಾ ಪೋಲೀಸರು ಆರೋಪಿ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ. 324, 326, 504 ರಡಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುವುದಾಗಿ ಆರೋಪಿಸಿ, ನ್ಯಾಯಾಲಯಕ್ಕೆ ಈ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ.

2. ದೋಷಾರೋಪಣ ಪತ್ರದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿರುತ್ತದೆ.

ದಿನಾಂಕಃ 14.03.2016 ರಂದು ಮಧ್ಯರಾತ್ರಿ ಅಂದರೆ 15.03.2016 ರಂದು ಸುಮಾರು 12.30 ಗಂಟೆ ಸಮಯದಲ್ಲಿ ಶಿಡ್ಲಘಟ್ಟ ಗ್ರಾಮಾಂತರ ಪೋಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಜಪ್ತಿಹೊಸಹಳ್ಳಿ ಗ್ರಾಮದಲ್ಲಿ ಚಾಸಾ.1 ರವರು ಅವರಿಗೆ ಸೇರಿದ ಹಸುಗಳ ಮನೆಯಲ್ಲಿ ಮಲಗಿದ್ದಾಗ ಹಳೆಯ ದ್ವೇಷದ ಹಿನ್ನೆಲೆಯಲ್ಲಿ ಆರೋಪಿಯು ಅಲ್ಲಿಗೆ ಬಂದು ಚಾಸಾ.1 ರವರನ್ನು ಕುರಿತು "ನನ್ನ ಮಗನೆ ನನ್ನ ಮೇಲೆ ಇಲ್ಲ-ಸಲ್ಲದ ಮಾತುಗಳು ಹೇಳಿಕೊಂಡು ಮಾನ ಮರ್ಯಾದೆ ತೆಗೆಯುತ್ತೀಯಾ" ಎಂದು ಅವಾಚ್ಯ ಶಬ್ದಗಳಿಂದ ಬೈದು, ದೊಣ್ಣೆಯಿಂದ ಚಾಸಾ.1 ರವರ ಬಲಗಾಲಿಗೆ ಬಲವಾಗಿ ಹೊಡೆದು ತೀವ್ರಸ್ವರೂಪದ ಗಾಯವನ್ನುಂಟುಮಾಡಿ, ಅದೇ ದೊಣ್ಣೆಯಿಂದ ಅವರ ಎಡಮುಂಗೈಗೆ ಹೊಡೆದು ಸಾಧಾರಣ ಸ್ವರೂಪದ ಗಾಯವನ್ನುಟಂಮಾಡಿರುತ್ತಾರೆ ಎಂಬುದು ಅಭಿಯೋಜನೆಯ ಪ್ರಕರಣವಾಗಿದೆ.

3. ಈ ಪ್ರಕರಣದ ಪ್ರಥಮ ಮಾಹಿತಿದಾರರಾದ ಮುನಿರಾಜಪ್ಪ ರವರು ದಿನಾಂಕಃ 15.03.2016 ರಂದು ಶಿಡ್ಲಘಟ್ಟ ಸರ್ಕಾರಿ ಆಸ್ಪತ್ರೆಯಲ್ಲಿ ನೀಡಿದ ಹೇಳಿಕೆಯ ಆಧಾರದ ಮೇಲೆ ಶಿಡ್ಲಘಟ್ಟ ಗ್ರಾಮಾಂತರ ಪೋಲೀಸ್ ಠಾಣಾ ಆರಕ್ಷಕ ಉಪ-ನಿರೀಕ್ಷಕರಾಗಿದ್ದ ಪ್ರದೀಪ್ ಪೂಜಾರಿ.ಎ. ರವರು ತನಿಖೆ ಪೂರ್ಣಗೊಳಿಸಿ, ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ. 324, 326, 504 ರಡಿಯಲ್ಲಿ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದಾರೆ.

4. ಆರೋಪಿಯು ನ್ಯಾಯಾಲಯದ ಜಾಮೀನು ಪಡೆದು, ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ನ್ಯಾಯಾಲಯವು ಭಾರತೀಯ ದಂಡ ಸಂಹಿತೆ ಕಲಂ. 324, 326, 504 ರ ಆರೋಪಗಳಿಗೆ ಸಂಜ್ಞೆತೆಯನ್ನು ತೆಗೆದುಕೊಂಡಿದೆ. ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ.207 ರಡಿ ದೋಷಾರೋಪಣಾ ಪಟ್ಟಿಯ ನಕಲನ್ನು ಆರೋಪಿಗೆ ಜಾರಿಗೊಳಿಸಿದೆ. ದೋಷಾರೋಪಣೆ ರಚಿಸುವ ಪೂರ್ವದಲ್ಲಿ ವಾದವನ್ನು ಆಲಿಸಲಾಯಿತು. ಆದರೆ ಆರೋಪಿ ಯನ್ನು ದೋಷಾರೋಪಣೆ ರಚಿಸುವ ಪೂರ್ವದಲ್ಲಿ ವಿಮೋಚನೆ ಮಾಡಲು ಯಾವುದೇ ಸಕಾರಣಗಳು ನ್ಯಾಯಾಲಯಕ್ಕೆ ಕಂಡು ಬರದ ಕಾರಣ, ಆರೋಪಿ ವಿರುದ್ದ ಭಾರತೀಯ ದಂಡ ಸಂಹಿತೆ ಕಲಂ. 324, 326, 504 ರಡಿಯಲ್ಲಿ ದೋಷಾರೋಪಣೆಯನ್ನು ರಚಿಸಿ, ಓದಿ, ಆರೋಪಿಗೆ ತಿಳಿಯುವ ಭಾಷೆಯಲ್ಲಿ ವಿವರಿಸಿ ಹೇಳಿದ್ದು, ಆರೋಪಿ ತಾವು ತಪ್ಪು ಮಾಡಿಲ್ಲ, ವಿಚಾರಣೆಯಾಗಬೇಕೆಂದು ಉತ್ತರಿಸಿರುತ್ತಾರೆ.

5. ಅಭಿಯೋಜನೆಯು ಆರೋಪಿ ವಿರುದ್ದ ಮಾಡಿರುವ ಆರೋಪಗಳನ್ನು ಸಂದೇಹಾತೀತವಾಗಿ ರುಜುವಾತು ಪಡಿಸಲು ತಮ್ಮ ಪರವಾಗಿ

ಫ್ರಾಸಾ-1 ರಿಂದ ಫ್ರಾಸಾ.7 ರವರನ್ನು ವಿಚಾರಣೆಗೆ ಗುರಿಪಡಿಸಿ, ನಿಪಿ-1 ರಿಂದ 5 ರ ದಾಖಲೆಗಳನ್ನು ಹಾಗೂ ಮು.ಮಾ-1 ರಿಂದ 4 ನ್ನು ಗುರುತಿಸಿಕೊಂಡಿದೆ. ಆರೋಪಿ ಪರ ವಕೀಲರು ಫ್ರಾಸಾ.1 ರವರನ್ನು ಪಾಟಿಸವಾಲಿಗೊಳಪಡಿಸಿ, ಪಾಟಿಸವಾಲಿನಲ್ಲಿ ತಮ್ಮ ಪರವಾಗಿ ಕಡತದಲ್ಲಿ ಲಭ್ಯವಿದ್ದ 4 ಛಾಯಾಚಿತ್ರಗಳನ್ನು ನಿಡಿ.1 ರಿಂದ ನಿಡಿ.4 ರಂತೆ ಗುರ್ತಿಸಿಕೊಂಡಿರುತ್ತಾರೆ.

6. ಅಭಿಯೋಜನೆಯ ಪರ ಸಾಕ್ಷಿಗಳ ವಿಚಾರಣೆ ಮುಗಿದ ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರ ಅಡಿಯಲ್ಲಿ ಆರೋಪಿ ಹೇಳಿಕೆಯನ್ನು ದಾಖಲು ಮಾಡಿದ್ದು, ಆರೋಪಿ ತಮ್ಮ ವಿರುದ್ಧ ನುಡಿದಿರುವ ಸಾಕ್ಷ್ಯವನ್ನು ಅಲ್ಲಗಳೆದಿದ್ದು, ತಮ್ಮ ಪರ ಸಾಕ್ಷ್ಯ ವಿಚಾರಣೆ ಇಲ್ಲವೆಂದು ನುಡಿದಿದ್ದರಿಂದ ಪ್ರಕರಣವನ್ನು ವಾದ ಮಂಡನೆಗೆ ಮುಂದೂಡಲಾಯಿತು.

7. ಅಭಿಯೋಜನಾ ಪರ ಮಾನ್ಯ ಸಹಾಯಕ ಸರ್ಕಾರಿ ವಕೀಲರ ಮತ್ತು ನುರಿತ ಆರೋಪಿ ಪರ ವಕೀಲರ ವಾದವನ್ನು ಆಲಿಸಲಾಯಿತು. ನ್ಯಾಯಾಲಯದ ಮುಂದೆ ಲಭ್ಯವಿರುವ ದಾಖಲಾತಿಗಳ ಆಧಾರದ ಮೇಲೆ ಈ ನ್ಯಾಯಾಲಯದ ತೀರ್ಮಾನಕ್ಕೆ ಕೆಳಕಂಡ ಅಂಶಗಳು ಉದ್ಭವಿಸಿದೆ.

## ಅಂಶಗಳು

1. ದಿನಾಂಕಃ 15.03.2016 ರಂದು ಸುಮಾರು ಬೆಳಗಿನ ಜಾವ 12.30 (A.M) ಗಂಟೆ ಸಮಯದಲ್ಲಿ ಶಿಡ್ಲಘಟ್ಟ ಗ್ರಾಮಾಂತರ ಪೋಲೀಸ್ ಠಾಣಾ ವ್ಯಾಪ್ತಿಯ ಜಪ್ತಿಹೊಸಹಳ್ಳಿ ಗ್ರಾಮದಲ್ಲಿ ಚಾಸಾ.1 ರವರು ಅವರಿಗೆ ಸೇರಿದ ಹಸುಗಳ ಮನೆಯಲ್ಲಿ ಮಲಗಿದ್ದಾಗ ಹಳೆಯ ದ್ವೇಷದ ಹಿನ್ನೆಲೆಯಲ್ಲಿ ಆರೋಪಿಯು ಅಲ್ಲಿಗೆ ಹೋಗಿ ಚಾಸಾ.1 ರವರನ್ನು ಕುರಿತು "ನನ್ನ ಮಗನೆ ನನ್ನ ಮೇಲೆ ಇಲ್ಲ-ಸಲ್ಲದ ಮಾತುಗಳು ಹೇಳಿಕೊಂಡು ಮಾನ, ಮರ್ಯಾದೆ

ತೆಗೆಯುತ್ತೀಯಾ" ಎಂದು ಅವಾಚ್ಯ ಶಬ್ದಗಳಿಂದ ಬೈದು, ಅವಮಾನಪಡಿಸುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.504 ರ ಮೇರೆಗೆ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿದೆಯೇ?

2. ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿ ದೊಣ್ಣೆಯಿಂದ ಚಾಸಾ.1 ರವರ ಬಲಗಾಲಿಗೆ ಬಲವಾಗಿ ಹೊಡೆದು ತೀವ್ರಸ್ವರೂಪದ ಗಾಯವನ್ನುಂಟುಮಾಡುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.326 ರ ಮೇರೆಗೆ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿದೆಯೇ?

3. ಮೂರನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿ ದೊಣ್ಣೆಯಿಂದ ಚಾಸಾ.1 ರವರ ಎಡಮುಂಗೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟುಮಾಡುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.324 ರ ಮೇರೆಗೆ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿದೆಯೇ?

4.ಆದೇಶ ಏನು?

8. ನ್ಯಾಯಾಲಯದ ಮುಂದೆ ಲಭ್ಯವಿರುವ ಸಾಕ್ಷ್ಯದಾರಗಳಿಂದ ಮೇಲ್ಕಂಡ ಅಂಶಕ್ಕೆ ಕೆಳಕಂಡಂತೆ ಉತ್ತರಿಸಿರುತ್ತೇನೆ.

ಅಂಶ-1 ರಿಂದ 3: ನಕಾರಾತ್ಮಕವಾಗಿ

ಅಂಶ-4 : ಈ ಕೆಳಕಂಡ ಕಾರಣಗಳಿಂದ ಅಂತಿಮ ಆದೇಶದಂತೆ

## ಕಾರಣಗಳು

9. <u>ಅಂಶ.1 ರಿಂದ 3</u> -ಮೇಲ್ಕಂಡ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ, ಸಾಕ್ಷ್ಯದ ಪುನರಾವರ್ತನೆಯನ್ನು ತಪ್ಪಿಸಲು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

10. ಪ್ರಸ್ತುತ ಅಭಿಯೋಜನೆ ಪ್ರಕರಣದಲ್ಲಿ ಪ್ರಥಮ ವರ್ತಮಾನ ವರದಿ/ ಪ್ರಥಮ ಮಾಹಿತಿ ಹೇಳಿಕೆಯನ್ನು ಪರಿಶೀಲಿಸಿದಾಗ ಆರೋಪಿಯು 3 ಅಪರಿಚಿತ ವ್ಯಕ್ತಿಗಳನ್ನು ಪ್ರಚೋದಿಸಿ ಪ್ರಥಮ ಮಾಹಿತಿದಾರನ ಮೇಲೆ ಮೂರು ದೊಣ್ಣೆಗಳಿಂದ ತೀವ್ರಸ್ವರೂಪದ ಗಾಯ ಮಾಡಿಸಿದ್ದಾರೆ ಮತ್ತು ಆರೋಪಿಯು ಸ್ವಲ್ಪ ಆಚೆ ನಿಂತು "ಸಾಕು ಬನ್ನಿ" ಎಂಬಂತೆ ಹೇಳಿದ್ದಾನೆ ಎಂದು ಆರೋಪಿಸಲಾಗಿದೆ. ಈ ಆಧಾರದ ಮೇಲೆ ಭಾರತೀಯ ದಂಡ ಸಂಹಿತೆ ಕಲಂ 324, 326 ಮತ್ತು 114 ಸಹವಾಚಕ 34 ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

11. ಆದರೆ ಪ್ರಥಮ ಮಾಹಿತಿ ಹೇಳಿಕೆಯಲ್ಲಿ ಆರೋಪಿಯು ದೂರುದಾರನನ್ನು ನಿಂದಿಸಿದ್ದಾನೆ ಎಂಬ ಯಾವುದೇ ನಿರ್ದಿಷ್ಟ ಆರೋಪವಿಲ್ಲ. ನಂತರ ತನಿಖೆಯ ಅಂತ್ಯದಲ್ಲಿ ಸಲ್ಲಿಸಿದ ದೋಷಾರೋಪಣ ಪತ್ರದಲ್ಲಿ ಆರೋಪಿಯು ಒಬ್ಬರೆ ದೂರುದಾರರಿಗೆ ದೊಣ್ಣೆಯಿಂದ ಒಡೆದು ತೀವ್ರಸ್ವರೂಪದ ಗಾಯ ಮಾಡಿ, ಅವಾಚ್ಯಶಬ್ದಗಳಿಂದ ನಿಂದಿಸಿದ್ದಾನೆ ಎಂಬ ಅಂಶವನ್ನು ಸೇರಿಸಿ ಭಾರತೀಯ ದಂಡ ಸಂಹಿತೆ ಕಲಂ. 324, 326, 504 ರಡಿಯಲ್ಲಿ ಆರೋಪಿ ವಿರುದ್ಧ ದೋಷರೋಪಣಾ ಪಟ್ಟಿ ಸಲ್ಲಿಸಲಾಗಿದೆ. ಆದರೆ ಭಾರತೀಯ ದಂಡ ಸಂಹಿತೆ ಕಲಂ.114 ಸಹವಾಚಕ ಕಲಂ.34 ನ್ನು ದೋಷರೋಪಣಾ ಪಟ್ಟಿಯಿಂದ ಫಿರ್ಯಾದುದಾರರು ನೀಡಿರುತ್ತಾರೆಂದು ಹೇಳುವ ಮರುಹೇಳಿಕೆ ಆಧಾರದ ಮೇಲೆ ಕೈ ಬಿಟ್ಟು, ಈ ಕೆಳಕಂಡಂತೆ ದೋಷಾರೋಪಣ ಪಟ್ಟಿಯನ್ನು ಆರೋಪಿಯ ವಿರುದ್ಧ ಸಲ್ಲಿಸಲಾಗಿದೆ.

12. ದಿನಾಂಕಃ 14.03.2016 ರಂದು ಮಧ್ಯರಾತ್ರಿ ಅಂದರೆ ದಿನಾಂಕಃ 15.03.2016 ರ ಬೆಳಿಗಿನ ಜಾವ 00.30 ಗಂಟೆಯಲ್ಲಿ ಚಾಸಾ.1 ರವರು ತಮ್ಮ ಬಾಬ್ತು

ಹಸುಗಳ ಮನೆಯ ಮುಂಭಾಗದಲ್ಲಿ ಮಲಗಿದ್ದಾಗ ನಾಯಿಗಳು ಬೊಗಳುವ ಶಬ್ದ ಕೇಳಿ ಎಚ್ಚರಗೊಂಡಾಗ ಹಳೆಯ ದ್ವೇಷದ ಹಿನ್ನೆಲೆಯಲ್ಲಿ ಆರೋಪಿಯು ಏಕಾಏಕಿ ಬಂದು ಚಾಸಾ.1 ರವರನ್ನು ಕುರಿತು "ನನ್ನ ಮಗನೆ ನನ್ನ ಮೇಲೆ ಇಲ್ಲ-ಸಲ್ಲದ ಮಾತುಗಳು ಹೇಳಿಕೊಂಡು ಮಾನ ಮರ್ಯಾದೆ ತೆಗೆಯುತ್ತೀಯಾ" ಎಂದು ಕೆಟ್ಟ ಮಾತುಗಳಿಂದ ಬೈದು, ಆರೋಪಿಯ ಕೈಯಲ್ಲಿದ್ದ ದೊಣ್ಣೆಯಿಂದ ಚಾಸಾ.1 ರವರ ಬಲಗಾಲಿಗೆ ಬಲವಾಗಿ ಹೊಡೆದು ತೀವ್ರಸ್ವರೂಪದ ಗಾಯವನ್ನುಂಟುಮಾಡಿ, ಅದೇ ದೊಣ್ಣೆಯಿಂದ ಎಡಮುಂಗೈಗೆ ಹೊಡೆದು ನೋವುಂಟುಮಾಡಿ, ಸಾಧಾರಣ ಸ್ವರೂಪದ ಗಾಯವನ್ನುಂಟುಮಾಡಿರುತ್ತಾರೆಂಬುದು ಅಭಿಯೋಜನೆಯ ಪ್ರಕರಣವಾಗಿದೆ.

13. ಆರೋಪಿ ವಿರುದ್ಧ ಮಾಡಿರುವ ಆರೋಪಗಳನ್ನು ಯಾವುದೇ ಸಂಶಯಕ್ಕೆ ಎಡೆಮಾಡಿಕೊಡದೆ ಸಾಕಷ್ಟು ಸಾಕ್ಷ್ಯಾಧಾರಗಳ ಮೂಲಕ ರುಜುವಾತುಪಡಿಸುವ ಹೊಣೆಗಾರಿಕೆ ಅಭಿಯೋಜನೆಯ ಮೇಲಿರುತ್ತದೆ. ಅಭಿಯೋಜನೆಯ ಪ್ರಕರಣದ ಸತ್ಯಾ-ಸತ್ಯೆತೆಗಳನ್ನು ಮತ್ತು ಆರೋಪಿ ವಿರುದ್ಧ ಮಾಡಿರುವ ಆರೋಪಗಳನ್ನು ರುಜುವಾತುಪಡಿಸಲು ಅಭಿಯೋಜನೆಯು ಪ್ರಥಮ ಮಾಹಿತಿ ದಾಖಲಿಸಿದವರು ಮತ್ತು ಗಾಯಾಳು ಸಾಕ್ಷಿದಾರರಾದ ಚಾಸಾ.1 ರವರನ್ನು ಫ್ರಾಸಾ-1 ಎಂದು ವಿಚಾರಣೆಗೆ ಗುರಿಪಡಿಸಿದ್ದು, ಇವರು ಅಭಿಯೋಜನಾ ಪ್ರಕರಣವನ್ನು ಬೆಂಬಲಿಸಿ, ಸಾಕ್ಷ್ಯ ನುಡಿದಿದ್ದಾರೆ. ಚಾಸಾ.2 ರವರು ಚಾಸಾ.1 ರವರ ಪತ್ನಿಯಾಗಿದ್ದು, ಇವರು ಸಹ ಅಭಿಯೋಜನೆ ಪ್ರಕರಣವನ್ನು ಬೆಂಬಲಿಸಿ, ಸಾಕ್ಷ್ಯ ನುಡಿದಿದ್ದಾರೆ. ಚಾಸಾ.3 ರವರು ಚಾಸಾ.1 ರವರ ಭಾವನಾಗಿದ್ದು, ಇವರು ನಿಪಿ.2 ಸ್ಥಳ ಪಂಚನಾಮೆಯನ್ನು ಬೆಂಬಲಿಸಿ ಸಾಕ್ಷ್ಯ ನುಡಿದಿದ್ದಾರೆ. ಚಾಸಾ.4 ರವರು

ಅಭಿಯೋಜನಾ ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಅಭಿಯೋಜನೆಯವರ ಕೋರಿಕೆ ಮೇರೆಗೆ ಇವರ ಸಾಕ್ಷವನ್ನು ಕೈಬಿಡಲಾಗಿದೆ. ಚಾಸಾ.5 ರಿಂದ 7 ರವರು ಅಭಿಯೋಜನಾ ಪ್ರಕರಣದ ಪಂಚನಾಮೆ ಸಾಕ್ಷಿದಾರರಾಗಿದ್ದು, ಇವರನ್ನು ಅಭಿಯೋಜನೆಯು ಪ್ರಾಸಾ.4 ರಿಂದ 6 ಎಂದು ವಿಚಾರಣೆಗೆ ಗುರಿಪಡಿಸಿದ್ದು, ಇವರು ಅಭಿಯೋಜನಾ ಪ್ರಕರಣವನ್ನು ಅಂದರೆ ಸ್ಥಳ ಪಂಚನಾಮೆಯನ್ನು ಬೆಂಬಲಿಸಿ, ಸಾಕ್ಷ್ಯ ನುಡಿದಿರುವುದಿಲ್ಲ. ಚಾಸಾ.8 ರವರು ವೈದ್ಯರಾಗಿದ್ದು, ಅಭಿಯೋಜನಾ ಪ್ರಕಾರ ಇವರು ಚಾಸಾ.1 ರವರಿಗೆ ಪ್ರಥಮ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರು ಆಸ್ಪತ್ರೆಗೆ ಕಳುಹಿಸಿದವರಾಗಿದ್ದಾರೆ. ಆದರೆ ಚಾಸಾ.8 ರವರನ್ನು ಕಣ್ತಪ್ಪಿನಿಂದ ದೋಷಾರೋಪಣಾ ಪಟ್ಟಿಯಲ್ಲಿ ಸಾಕ್ಷಿಯಾಗಿ ಸೇರಿಸಿದ್ದು, ಅವರ ಸಾಕ್ಷ್ಯವನ್ನು ಅಭಿಯೋಜನೆಯವರ ಕೋರಿಕೆ ಮೇರೆಗೆ ಕೈಬಿಡಲಾಗಿದೆ.

14. ಚಾಸಾ.9 ರವರು ಚಾಸಾ.1 ರವರಿಗೆ ಚಿಕಿತ್ಸೆ ನೀಡಿದ ವೈದ್ಯರಾಗಿದ್ದು, ಇವರಿಗೆ ನ್ಯಾಯಾಲಯದಿಂದ ಸಾಕಷ್ಟು ಸಮನ್ಸ್ ಹೊರಡಿಸಿದರೂ ಅಭಿಯೋಜನೆಯು ಇವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿ, ಸಾಕ್ಷ್ಯ ನುಡಿಸುವಲ್ಲಿ ವಿಫಲವಾಗಿದೆ. ಮತ್ತೊಮ್ಮೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಅಪರಾಧ ಪ್ರಕ್ರಿಯಾ ಸಂಹಿತೆ ಕಲಂ.311 ರಡಿಯಲ್ಲಿ ಚಾಸಾ.9 ರವರಿಗೆ ಸಮನ್ಸ್ ಹೊರಡಿಸಬೇಕೆಂದು ಕೋರಿ ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಿ, ಚಾಸಾ.9 ರವರಿಗೆ ಸಮನ್ಸ್ ಹೊರಡಿಸಿದರೂ ಸಹ ಚಾಸಾ.9 ರವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿ, ಸಾಕ್ಷ್ಯ ನುಡಿಸುವಲ್ಲಿ ಅಭಿಯೋಜನೆಯು ವಿಫಲವಾಗಿದ್ದು, ಅವರ ಸಾಕ್ಷ್ಯವನ್ನು ಕೈಬಿಡಲಾಗಿದೆ. ಆರೋಪಿ ವಿರುದ್ಧ ಪ್ರಕರಣ ದಾಖಲಿಸಿಕೊಂಡು ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ

ತನಿಖಾಧಿಕಾರಿಗಳಾದ ಚಾಸಾ.10 ರವರನ್ನು ಅಭಿಯೋಜನೆಯು ಪ್ರಾಸಾ.7 ಎಂದು ವಿಚಾರಣೆಗೆ ಗುರಿಪಡಿಸಿದೆ. ಅಭಿಯೋಜನೆಯ ಸಾಕ್ಷಿದಾರರ ಸಾಕ್ಷ್ಯದಲ್ಲಿ ಅಭಿಯೋಜನೆಯು ನಿಪಿ.1 ರಿಂದ 5 ದಾಖಲೆಗಳನ್ನು ಮತ್ತು ಮು.ಮಾ-1 ರಿಂದ 4 ನ್ನು ಗುರ್ತಿಸಿಕೊಂಡಿರುತ್ತಾರೆ. ನಿಪಿ.1 ಪ್ರಥಮ ವರ್ತಮಾನ ಹೇಳಿಕೆಯಾಗಿರುತ್ತದೆ. ನಿಪಿ.2 ಸ್ಥಳ ಪಂಚನಾಮೆಯಾಗಿರುತ್ತದೆ. ನಿಪಿ.3 ಪ್ರಥಮ ವರ್ತಮಾನ ವರದಿಯಾಗಿರುತ್ತದೆ. ನಿಪಿ.4 ಸ್ವತ್ತಿನ ಪಟ್ಟಿಯಾಗಿರುತ್ತದೆ. ನಿಪಿ.5 ಪ್ರಾಸಾ 1 ರವರ ಗಾಯದ ಪ್ರಮಾಣ ಪತ್ರವಾಗಿರುತ್ತದೆ. ಮು.ಮಾ-1 ರಿಂದ 3 , ಮೂರು ನೀಲಗಿರಿ ದೊಣ್ಣೆಗಳಾಗಿರುತ್ತವೆ. ಮು.ಮಾ-4 ಒಂದು ಪಾಲಿಸ್ಟರ್ ಬಟ್ಟೆಯಾಗಿರುತ್ತದೆ.

15. ಪ್ರಾಸಾ.1 ರವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯು ಆಗಾಗ್ಗೆ ತಮ್ಮ ಜೊತೆ ಸಣ್ಣ ಸಣ್ಣ ಗಲಾಟೆ ಮಾಡುತ್ತಿದ್ದರು. ದಿನಾಂಕ:14.03.2016 ರಂದು ತಮ್ಮ ಮನೆಯ ಮುಂದೆ ಶೆಡ್‌ನಲ್ಲಿ ಮಲಗಿದ್ದಾಗ ಸುಮಾರು 12.30 ಗಂಟೆ ಸಮಯದಲ್ಲಿ ನಾಯಿಗಳು ಬೊಗಳುವ ಶಬ್ದ ಕೇಳಿಸಿ, ತಮಗೆ ಎಚ್ಚರವಾಗಿದ್ದು, ಆಗ ಆರೋಪಿ ಮತ್ತು ಇತರೆ ಮೂರು ಜನ ವ್ಯಕ್ತಿಗಳು ತಮಗೆ ದೊಣ್ಣೆಯಿಂದ ಎಡಮೊಣಕೈ ಮೇಲೆ, ಬಲಕಾಲಿನ ಮೇಲೆ ಹೊಡೆದಿದ್ದರಿಂದ ತಮ್ಮ ಬಲಕಾಲು ಮೂಳೆ ಮುರಿತವಾಗಿತ್ತು ಮತ್ತು ಎಡಕೈ ಮೂಳೆ ಮುರಿದಿತ್ತು. ತಾವು ಕಿರುಚಿಕೊಂಡಾಗ ಚಾಸಾ.2 ಮತ್ತು 3 ರವರು ಸ್ಥಳಕ್ಕೆ ಬಂದು ತಮ್ಮನ್ನು ಆಂಬುಲೆನ್ಸ್ ನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ನಂತರ ಆಸ್ಪತ್ರೆಯಲ್ಲಿ ಪೋಲೀಸರಿಗೆ ನಿಪಿ.1 ರಂತೆ ಹೇಳಿಕೆಯನ್ನು ನೀಡಿರುವುದಾಗಿ ಮತ್ತು ಆರೋಪಿಯನ್ನು ಗುರ್ತಿಸಿ, ಸಾಕ್ಷ್ಯ ನುಡಿದಿದ್ದಾರೆ.

16. ಆರೋಪಿ ಪರ ವಕೀಲರು ಪ್ರಾಸಾ.1 ರವರನ್ನು ಪಾಟಿಸವಾಲು ಮಾಡಿದಾಗ, ಆ ದಿನ ರಾತ್ರಿ ಶೆಡ್ ಹಿಂಭಾಗದಿಂದ ಒಬ್ಬರು ಮತ್ತು ಮುಂಭಾಗದಿಂದ ಮೂರು ಜನ ಬಂದರು. ಆ ಸಮಯದಲ್ಲಿ ಆರೋಪಿಯು ಸಾಕು ಬಿಡಿ ಎಂದು ಕರಿಬೇವಿನ ಗಿಡದ ಕೆಳಗೆ ನಿಂತು ಹೇಳುತ್ತಿದ್ದರು. ಉಳಿದ ಮೂರು ಜನ ದೊಣ್ಣೆಯಿಂದ ಹೊಡೆದು ಮತ್ತು ಚಾಕುವಿನಿಂದ ತಮ್ಮ ಬಲಗಾಲಿಗೆ ಹೊಡೆದರು. ತಮ್ಮ ಹೆಂಡತಿಯಾದ ಚಾಸಾ.2 ರವರು ಶೆಡ್ ನಲ್ಲಿ ಮಲಗಿದ್ದು ಚೀರಾಟದ ಶಬ್ದ ಕೇಳಿಸಿಕೊಂಡು ಬಂದು ನಂತರ ಚಾಸಾ.3 ರವರನ್ನು ಕರೆದುಕೊಂಡು ಬಂದರು. ತಮ್ಮ ಭಾವ ಚಾಸಾ.3 ರವರು ಬರುವುದಕ್ಕಿಂತ ಮುಂಚೆ ಊರಿನ ಸುಮಾರು 20 ರಿಂದ 30 ಜನ ಬಂದಿದ್ದರು ಎಂದು ನುಡಿದಿದ್ದಾರೆ. ಆದರೆ, ಚಾಸಾ 3 ರವರು ಪ್ರಾಸಾ 1 ರವರ ಸಾಕ್ಷ್ಯವನ್ನು ಬೆಂಬಲಿಸದೆ ನಿ.ಪಿ.2 ಸ್ಥಳ ಪಂಚನಾಮೆಯನ್ನು ಮಾತ್ರ ಬೆಂಬಲಿಸಿದ್ದಾರೆ. ಪ್ರಾ.ಸಾ.2 ರವರು ಸಹ ಕೇಳಿಕೆಯ ಸಾಕ್ಷಿ ಆಗಿದ್ದಾರೆ.

17. ಪ್ರಾಸಾ.2 ರವರು ತಮ್ಮ ಸಾಕ್ಷ್ಯದಲ್ಲಿ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯುವ 6 ವರ್ಷಗಳ ಹಿಂದೆ ಚಾಸಾ.1 ರವರು ಊಟ ಮುಗಿಸಿ, ಹಸುಗಳನ್ನು ಕಟ್ಟಿ ಹಾಕುವ ಮನೆಗೆ ಹೋಗಿದ್ದಾಗ ಸುಮಾರು 12.00 ರಿಂದ 12.45 ಗಂಟೆ ಸಮಯದಲ್ಲಿ ಚಾಸಾ.3 ರವರು ತಮ್ಮನ್ನು ಎಬ್ಬಿಸಿ, ತಮ್ಮ ಮನೆಯ ಬಳಿ ಯಾರೋ ಕಿರುಚಿಕೊಳ್ಳುತ್ತಿದ್ದಾರೆಂದು ತಿಳಿಸಿದಾಗ, ಚಾಸಾ.3 ರವರೊಂದಿಗೆ ಹೋಗಿ ನೋಡಿದಾಗ ಚಾಸಾ.1 ರವರ ಕಾಲಿಗೆ ಪೆಟ್ಟು ಬಿದ್ದು, ತುಂಡಾಗಿದ್ದುದನ್ನು ಗಮನಿಸಿ, ಚಾಸಾ.1 ರವರನ್ನು ವಿಚಾರಿಸಿದಾಗ, ಆರೋಪಿಯು ಸದರಿ ಹಲ್ಲೆ ನಡೆಸಿದ್ದಾಗಿ ತಿಳಿಸಿದ ನಂತರ ಚಾಸಾ.3 ಮತ್ತು 4 ರವರ ಸಹಾಯದೊಂದಿಗೆ

ಫ್ರಾಸಾ.1 ರವರಿಗೆ ಶಿಡ್ಲಘಟ್ಟ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ನಂತರ 3 ತಿಂಗಳು ಬೆಂಗಳೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿರುವುದಾಗಿ ಹಾಗೆಯೇ ಮು.ಮಾ-1 ರಿಂದ 4 ಮತ್ತು ಆರೋಪಿಯನ್ನು ಗುರ್ತಿಸಿ ಸಾಕ್ಷ್ಯ ನುಡಿದಿದ್ದಾರೆ.

18. ಆರೋಪಿ ಪರ ವಕೀಲರು ಫ್ರಾಸಾ.2 ರವರನ್ನು ಪಾಟಿಸವಾಲು ಮಾಡಿದಾಗ ತಮ್ಮ ವಾಸದ ಮನೆಗೂ, ಹಸುಗಳನ್ನು ಕಟ್ಟಿ ಹಾಕುವ ಸ್ಥಳಕ್ಕೂ ಸುಮಾರು 500 ಮೀಟರ್ ಅಂತರ ಇರುತ್ತದೆ. ತಮ್ಮ ಮತ್ತು ಆರೋಪಿಯ ನಡುವೆ ಸುಮಾರು 15 ವರ್ಷಗಳಿಂದ ಗಲಾಟೆ ಆಗುತ್ತಿರುತ್ತದೆ. ಘಟನೆ ನಡೆಯುವ ಪೂರ್ವದಲ್ಲಿಯೂ ಸಹ 4 ರಿಂದ 5 ಬಾರಿ ಗಲಾಟೆಯಾಗಿದ್ದು, ಈ ಸಂಬಂಧ ಯಾವುದೇ ದೂರು ನೀಡಿಲ್ಲ. ಹಸುಗಳನ್ನು ಕಟ್ಟಿ ಹಾಕುವ ಮನೆಯಲ್ಲಿ ಯಾರೂ ವಾಸವಾಗಿರುವುದಿಲ್ಲ. ಚಾಸಾ.3 ರವರು ರಾತ್ರಿ ಸುಮಾರು 12.00 ಗಂಟೆಗೆ ಗಲಾಟೆ ವಿಚಾರ ತಿಳಿಸಿದರು. ಗಲಾಟೆಯನ್ನು ತಾವು ಪ್ರತ್ಯಕ್ಷವಾಗಿ ನೋಡಿಲ್ಲ. ವಿಧ್ಯುತ್ ಬಂದ್ ಮಾಡಿದ್ದರಿಂದ ಕತ್ತಲಾಗಿತ್ತು. ತಮ್ಮ ಗಂಡ ತಾವು ವಾಸ ಮಾಡುವ ಮನೆಯಲ್ಲಿಯೂ ಸಹ ಮಲಗುತಿದ್ದರು. ಆದರೆ ಹಸು ಕರು ಹಾಕಿದ್ದರಿಂದ ಅಲ್ಲಿ ಮಲಗಿಕೊಳ್ಳುತ್ತಿದ್ದರು ಎಂದು ಹೊಸ ಆವೃತ್ತಿ ಹೇಳಿಕೆ ನೀಡಿದ್ದಾರೆ. ಗಲಾಟೆ ಆದ ಸಮಯದಲ್ಲಿ ಸುಮಾರು 10 ಜನ ಸೇರಿದ್ದರೆಂದು ನುಡಿದಿರುತ್ತಾರೆ.

19. ಅಭಿಯೋಜನೆಯು ಸ್ಥಳ ಪಂಚನಾಮೆ ಹಾಗೂ ಮುಮಾ.1 ರಿಂದ 4 ರ ಅಮಾನತ್ತು ಪ್ರಕ್ರಿಯೆಯನ್ನು ಸಾಬೀತುಪಡಿಸಲು ಫ್ರಾಸಾ.3 ರಿಂದ ಫ್ರಾಸಾ.6 ರವರನ್ನು ಪಂಚಸಾಕ್ಷಿದಾರರಾಗಿ ಪರೀಕ್ಷಿಸಿದೆ. ಫ್ರಾಸಾ.3 ರವರು ಸ್ಥಳ ಪಂಚನಾಮೆಯನ್ನು ಸಂಪೂರ್ಣ ಬೆಂಬಲಿಸಿಲ್ಲ. ಅವರು ತಮ್ಮ ಸಾಕ್ಷ್ಯದಲ್ಲಿ ತಾವು

ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯುವ ಸುಮಾರು 5 ವರ್ಷಗಳ ಹಿಂದೆ ಚಾಸಾ.1 ರವರ ಮನೆಯ ಬಳಿ ನಿಪಿ.2 ಸ್ಥಳ ಪಂಚನಾಮೆಗೆ ಸಹಿ ಮಾಡಿರುವುದಾಗಿ ನುಡಿದಿದ್ದಾರೆ. ಹಾಗೆಯೇ ನಿಪಿ.2 ಕ್ಕೆ ಚಾಸಾ.4, ಚಾಸಾ.6 ಮತ್ತು ಚಾಸಾ.7 ರವರು ಸಹಿ ಮಾಡಿರುತ್ತಾರೆ. ಸ್ಥಳದಲ್ಲಿ ಪೋಲೀಸರು ದೊಣ್ಣೆ ಮತ್ತು ಸೀರೆಯನ್ನು ಅಮಾನತುಪಡಿಸಿಕೊಂಡರೆಂದು, ಮುದ್ದೆಮಾಲು-1 ಮತ್ತು 2 ನ್ನು ಗುರ್ತಿಸಿ, ಸಾಕ್ಷ್ಯ ನುಡಿದಿರುತ್ತಾರೆ. ಫ್ರಾಸಾ.3 ರವರನ್ನು ಆರೋಪಿ ಪರ ವಕೀಲರು ಪಾಟಿಸವಾಲು ಮಾಡಿ, ಅವರ ಸಾಕ್ಷ್ಯವನ್ನು ಅಲ್ಲಗಳೆದಿದ್ದು, ಫ್ರಾಸಾ.3 ರವರು ಪಾಟಿಸವಾಲಿನಲ್ಲಿ ಫ್ರಾಸಾ.1 ರವರಿಗೂ ಆರೋಪಿಗೂ ಮೊದಲಿನಿಂದಲೂ ವೈಮನಸ್ಸು ಇರುತ್ತದೆ ಎಂಬ ಆರೋಪಿ ಪರ ವಕೀಲರ ಸೂಚನೆಯನ್ನು ಆಲ್ಲೆಗೆಳೆದಿದ್ದಾರೆ. ತಮಗೆ ನಿಪಿ.2 ರಲ್ಲಿ ಬರೆದಿರುವ ಸಂಗತಿಗಳು ಗೊತ್ತಿಲ್ಲ. ಪೋಲೀಸರು ಸಹಿ ಮಾಡು ಎಂದು ಹೇಳಿದ್ದರಿಂದ ಸಹಿ ಮಾಡಿದ್ದೇನೆಂದು ನುಡಿದಿರುತ್ತಾರೆ. ಆದರೆ ನಿ.ಪಿ.2 ಸ್ಥಳ ಪಂಚನಾಮೆಯನ್ನು ಗಮನಿಸಿದಾಗ ಸೀರೆಯನ್ನು ಅಮಾನತ್ತು ಪಡಿಸಿಕೊಂಡಿರುವುದು ಕಂಡು ಬರುವುದಿಲ್ಲ.

20. ಆದರೆ ಫ್ರಾಸಾ.4 ರಿಂದ 6 ರವರು ಅಭಿಯೋಜನೆಯ ಪ್ರಕರಣವನ್ನು ಬೆಂಬಲಿಸಿಲ್ಲ. ತಮ್ಮ ಸಾಕ್ಷ್ಯದಲ್ಲಿ ಪೊಲೀಸರು ಕೇಳಿದ ಮೇರೆಗೆ ಮಾತ್ರ ಸ್ಥಳ ಪಂಚನಾಮೆಗೆ ಸಹಿ ಹಾಕಿರುವುದಾಗಿ ಹಾಗೂ ತಮ್ಮ ಸಮ್ಮುಖದಲ್ಲಿ ಯಾವುದೇ ವಸ್ತುವನ್ನು ಪೊಲೀಸರು ಜಪ್ತಿ ಮಾಡಿಲ್ಲ ಎಂದು ಸ್ಪಷ್ಟವಾಗಿ ನುಡಿದಿದ್ದಾರೆ. ಪಂಚನಾಮೆ ಸಾಕ್ಷಿದಾರರು ಪ್ರತಿಕೂಲ ಸಾಕ್ಷಿದಾರರೆಂಬ ಕಾರಣಕ್ಕೆ ಅವರ ಸಂಪೂರ್ಣ ಸಾಕ್ಷ್ಯವನ್ನು ತಿರಸ್ಕರಿಸಲು ಸಾಧ್ಯವಿಲ್ಲ. ಅವರ ಸಾಕ್ಷ್ಯದಲ್ಲಿ ವಿಶ್ವಾಸಾರ್ಹ ಹಾಗೂ ಇತರೆ ಸಾಕ್ಷ್ಯಗಳಿಂದ ದೃಢೀಕರಣ ಹೊಂದಿರುವ ಭಾಗವನ್ನು

ನ್ಯಾಯಾಲಯ ಪರಿಗಣಿಸಬಹುದು. ಆದರೆ ಪ್ರಸ್ತುತ ಪ್ರಕರಣದಲ್ಲಿ ಸ್ಥಳ ಪಂಚನಾಮೆ ಮತ್ತು ಜಪ್ತಿ ಪ್ರಕ್ರಿಯೆ ನಡೆದಿರುವುದನ್ನು ದೃಢೀಕರಿಸುವ ಯಾವುದೇ ಸ್ವತಂತ್ರ ಸಾಕ್ಷ್ಯ ಅಭಿಯೋಜನೆಯೂ ಮಂಡಿಸಿಲ್ಲ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಫ್ರಾಸಾ.4 ರಿಂದ 6 ರವರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಪಾಟಿಸವಾಲು ಮಾಡಿದರೂ ಸಹ ಅಭಿಯೋಜನೆಯ ಪ್ರಕರಣಕ್ಕೆ ಅನುಕೂಲವಾಗುವಂತಹ ಯಾವುದೇ ಮಹತ್ವದ ಒಪ್ಪಿಗೆಯನ್ನು ಹೊರಬಂದಿಲ್ಲ. ಆದ್ದರಿಂದ ಸ್ಥಳ ಪಂಚನಾಮೆ ಹಾಗೂ ಜಪ್ತಿ ಪ್ರಕ್ರಿಯೆಯನ್ನು ಕೇವಲ ತನಿಖಾಧಿಕಾರಿಯ ಸಾಕ್ಷ್ಯದ ಆಧಾರದ ಮೇಲೆ ಸಾಬೀತಾಗಿದೆ ಎಂದು ಹೇಳುವುದು ಸುರಕ್ಷಿತವಲ್ಲ ಎಂದು ನ್ಯಾಯಾಲಯ ಭಾವಿಸಿದೆ. ಸ್ವತಂತ್ರ ಪಂಚಸಾಕ್ಷಿದಾರರು ಜಪ್ತಿ ನಡೆದಿರುವುದನ್ನೇ ನಿರಾಕರಿಸಿರುವ ಸಂದರ್ಭದಲ್ಲಿ ಸ್ಥಳ ಪಂಚನಾಮೆಗೆ ಕಾನೂನುಬದ್ಧವಾಗಿ ರಚನೆಯಾಗಿದೆ ಹಾಗೂ ವಸ್ತುಗಳ ಜಪ್ತಿಯು ಕಾನೂನು ಪ್ರಕಾರ ನಡೆದಿದೆ ಎಂಬುದನ್ನು ಅಭಿಯೋಜನೆಯು ಸಂಶಯತೀತವಾಗಿ ರುಜುವಾತುಪಡಿಸಲು ವಿಫಲವಾಗಿದೆ ಎಂದು ನ್ಯಾಯಲಯ ಅಭಿಪ್ರಾಯಪಟ್ಟಿದೆ.

21. ಫ್ರಾಸಾ.7 ರವರು ತನಿಖಾಧಿಕಾರಿಗಳಾಗಿದ್ದು, ತಾವು ಆರೋಪಿ ವಿರುದ್ಧ ನಿಪಿ.1 ರಂತೆ ಪ್ರಥಮ ವರ್ತಮಾನ ಹೇಳಿಕೆ ಸ್ವೀಕರಿಸಿ, ನಿಪಿ.3 ರಂತೆ ಪ್ರಥಮ ವರ್ತಮಾನ ವರದಿ ತಯಾರಿಸಿ, ಸ್ಥಳಕ್ಕೆ ಭೇಟಿ ನೀಡಿ, ನಿಪಿ.2 ರಂತೆ ಸ್ಥಳ ಪಂಚನಾಮೆಯನ್ನು ಚಾಸಾ.3, 5 ರಿಂದ 7 ರವರ ಸಮಕ್ಷಮ ಜರುಗಿಸಿ, ನಿಪಿ.2 ರ ಕಾಲಕ್ಕೆ ಮು.ಮಾ-1 ರಿಂದ 4 ನ್ನು ಅಮಾನತ್ತುಪಡಿಸಿಕೊಂಡು, ನಿಪಿ.4 ರಂತೆ ಸ್ವತ್ತಿನ ಪಟ್ಟಿ ತಯಾರಿಸಿ, ಕಡತಕ್ಕೆ ಅಳವಡಿಸಿಕೊಂಡು ನಂತರ ಚಾಸಾ.2 ರಿಂದ 6 ರವರ ಹೇಳಿಕೆಗಳನ್ನು ದಾಖಲಿಸಿ, ಆರೋಪಿಯ ಸ್ವಇಚ್ಛಾ ಹೇಳಿಕೆಯನ್ನು

ದಾಖಲಿಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಮುಂದುವರಿದು, ಫ್ರಾಸಾ.1 ರವರ ಮರುಹೇಳಿಕೆಯನ್ನು ಪಡೆದುಕೊಂಡು, ಚಾಸಾ.1 ರವರ ಗಾಯದ ಪ್ರಮಾಣ ಪತ್ರವನ್ನು ನಿಪಿ.5 ರಂತೆ ಪಡೆದು, ಕಡತಕ್ಕೆ ಅಳವಡಿಸಿಕೊಂಡು, ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಆರೋಪಿ ಪರ ವಕೀಲರು ಫ್ರಾಸಾ.7 ರವರ ತನಿಖಾ ವೈಖರಿಯನ್ನು ಪಾಟಿಸವಾಲು ಮಾಡಿ, ಅಲ್ಲಗಳೆದಿರುತ್ತಾರೆ. ಫ್ರಾಸಾ.7 ತನಿಖಾಧಿಕಾರಿಗಳ ಸಾಕ್ಷ್ಯವು ಅಭಿಯೋಜನಾ ಪ್ರಕರಣವನ್ನು ಬೆಂಬಲಿಸಿದರೂ, ತನಿಖಾಧಿಕಾರಗಳ ಸಾಕ್ಷ್ಯವು ಕೇವಲ ತನಿಖೆಯ ಕ್ರಮಕ್ಕೆ ಸಂಬಂಧಿಸಿದ್ದು ಮಾತ್ರವಾಗಿದ್ದು, ಘಟನೆ ನಡೆದ ರೀತಿಯನ್ನು ದೃಢಪಡಿಸುವ ಸಾಕ್ಷ್ಯಕ್ಕೆ ಪರ್ಯಾಯವಾಗುವುದಿಲ್ಲ.

22. ಅಭಿಯೋಜನಾ ಪರವಾಗಿ ಸಾಕ್ಷ್ಯ ನುಡಿದಿರುವ ಫ್ರಾಸಾ.1 ರಿಂದ 3 ಮೌಖಿಕ ಸಾಕ್ಷ್ಯವನ್ನು ಮತ್ತು ದಾಖಲಾತಿ ಸಾಕ್ಷ್ಯವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಅಭಿಯೋಜನೆಯ ಪ್ರಕರಣದಲ್ಲಿ ಹಲವಾರು ವ್ಯತಿರಿಕ್ತತೆಗಳು, ಮುಂದುವರಿಕೆಗಳು, ಮತ್ತು ದೋಷಗಳು ಕಂಡುಬಂದಿರುತ್ತದೆ. ನಿ.ಪಿ.1 ಪ್ರಥಮ ವರ್ತಮಾನ ಹೇಳಿಕೆಯಲ್ಲಿ ಆರೋಪಿಯು ಫ್ರಾಸಾ.1 ರವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಎಂಬ ಯಾವುದೇ ಆರೋಪ ಮಾಡಿಲ್ಲ. ಆದರೆ ದೋಷಾರೋಪಣ ಪತ್ರದಲ್ಲಿ ಆರೋಪಿಯು ದೂರುದಾರರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆಂದು ಆರೋಪಿಸಲಾಗಿದೆ. ಆದರೆ ದೂರುದಾರ/ಗಾಯಾಳು ತಮ್ಮ ಸಾಕ್ಷ್ಯದಲ್ಲಿ ಆರೋಪಿಯು ಮತ್ತು ಇತರ 3 ವ್ಯಕ್ತಿಗಳು ದೊಣ್ಣೆಯಿಂದ ಹಲ್ಲೆ ಮಾಡಿದ್ದರೆಂದು ಹೇಳಿದ್ದರು, ಆರೋಪಿಯು ತನಗೆ ಅವಾಚ್ಯ ಶಬ್ದಗಳಿಂದ ನಿಂದನೆ ಮಾಡಿದ್ದಾನೆ

ಎಂದು ಹೇಳಿಲ್ಲ. ಆದ್ದರಿಂದ ಭಾರತೀಯ ದಂಡ ಸಂಹಿತೆ ಕಲಂ.504 ಅಡಿಯಲ್ಲಿ ಅಗತ್ಯವಾದ ಅಂಶಗಳನ್ನು ಸಾಬೀತುಪಡಿಸುವ ಪ್ರತ್ಯಕ್ಷ ಸಾಕ್ಷ್ಯ ಲಭ್ಯವಿಲ್ಲ.

23. ದೂರುದಾರರ/ ಗಾಯಾಳು ರವರ ಪತ್ನಿಯಾದ ಫ್ರಾಸಾ.2 ರವರು ಘಟನೆಯನ್ನು ತಾವು ನೋಡಿಲ್ಲ ಎಂದು ಒಪ್ಪಿಕೊಂಡಿದ್ದಾರೆ. ಫ್ರಾಸಾ.2 ರವರ ಸಾಕ್ಷ್ಯವು ಕೇಳಿದ ಮಾತಿನ ಸಾಕ್ಷ್ಯವಾಗಿದ್ದು, ಘಟನೆಯ ಕುರಿತು ನೇರಸಾಕ್ಷ್ಯ ವಾಗಿ ಅವಲಂಬಿಸಲು ಸಾಧ್ಯವಿಲ್ಲ. ಫ್ರಾಸಾ.3 ರವರು ದೂರುದಾರರ ಭಾವನಾಗಿದ್ದು, ಇವರೂ ಸಹ ಆರೋಪಿಯು ಫ್ರಾಸಾ.1 ರವರಿಗೆ ಹಲ್ಲೆ ಮಾಡಿದ್ದಾರೆ ಮತ್ತು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಎಂಬುದನ್ನು ಬೆಂಬಲಿಸಿ ಸಾಕ್ಷ್ಯ ನುಡಿದಿಲ್ಲ.

24. ಅಭಿಯೋಜನೆ ಪ್ರಕರಣದ ಪಂಚನಾಮೆ ಸಾಕ್ಷಿದಾರರು ಅಭಿಯೋಜನೆ ಪ್ರಕರಣವನ್ನು ಬೆಂಬಲಿಸದೆ ಪ್ರತಿಕೂಲ ಸಾಕ್ಷಿಗಳಾಗಿದ್ದಾರೆ. ಘಟನೆಯನ್ನು ಪ್ರತ್ಯಕ್ಷವಾಗಿ ಕಂಡ ಯಾವುದೇ ಸ್ವತಂತ್ರ ಸಾಕ್ಷಿಯನ್ನು ಅಭಿಯೋಜನೆಯು ವಿಚಾರಣೆ ಮಾಡಿಲ್ಲ. ಇನ್ನು, ಫ್ರಾಸಾ.1 ರವರಿಗೆ ಬಲಕಾಲು ಮುರಿತದ ಗಾಯವಾಗಿರುತ್ತದೆ ಎಂದು ಅಭಿಯೋಜನೆಯವರು ಹೇಳಿದ್ದರೂ, ಫ್ರಾಸಾ.1 ರವರಿಗೆ ಚಿಕಿತ್ಸೆ ನೀಡಿದ ವೈದ್ಯರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿ, ಸಾಕ್ಷ್ಯ ನುಡಿಸುವಲ್ಲಿ ಅಭಿಯೋಜನೆಯು ವಿಫಲವಾಗಿದೆ. ನಿಪಿ.5 ಗಾಯದ ಪ್ರಮಾಣ ಪತ್ರದಲ್ಲಿರುವ ಸಂಗತಿಯನ್ನು ಚಾಸಾ.9 ರವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿ, ಸಾಕ್ಷ್ಯ ನುಡಿಸಿ, ಅದರ ಬಗ್ಗೆ ಆರೋಪಿಗೆ ಪ್ರಶ್ನಿಸಲು ಅವಕಾಶ ಮಾಡಿಕೊಟ್ಟಿರುವುದಿಲ್ಲ. ಆರೋಪ ಪಟ್ಟಿಯಲ್ಲಿ ಚಾಸಾ.8 ವೈದ್ಯರ ಹೆಸರನ್ನು ಉಲ್ಲೇಖಿಸಿದ್ದರೂ ಯಾವುದೇ ವೈದ್ಯಕೀಯ

ದಾಖಲೆಗಳನ್ನು ಸಲ್ಲಿಸಿಲ್ಲ. ಮತ್ತೊಬ್ಬ ವೈದ್ಯರಾದ ಚಾಸಾ.9 ರವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ. ಗಾಯದ ಪ್ರಮಾಣ ಪತ್ರವನ್ನು ತನಿಖಾಧಿಕಾರಿಯ ಮೂಲಕ ಗುರುತಿಸಲಾಗಿದ್ದರು, ಅದನ್ನು ನೀಡಿದ ವೈದ್ಯರ ಸಾಕ್ಷ್ಯವಿಲ್ಲದೆ ಅದರಲ್ಲಿರುವ ಅಂಶಗಳನ್ನು ಸಂಪೂರ್ಣವಾಗಿ ಸಾಬೀತಾಗಿದೆ ಎಂದು ಪರಿಗಣಿಸಲು ಸಾಧ್ಯವಿಲ್ಲ. ಅಲ್ಲದೆ ಗಾಯದ ಪ್ರಮಾಣಪತ್ರಕ್ಕೆ ಬೆಂಬಲಿಸಿ ಯಾವುದೇ ವೈದಕೀಯ ವರದಿಯನ್ನು ಸಲ್ಲಿಸಿಲ್ಲ. ಫ್ರಾಸಾ.1 ರವರು ಶಿಡ್ಲಘಟ್ಟ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದರು ಎಂಬುದನ್ನು ತೋರಿಸಲು ಯಾವುದೇ ಸಾಕ್ಷ್ಯ ಒದಗಿಸಿಲ್ಲ. ಅಪರಾಧ ಪ್ರಕರಣಗಳಲ್ಲಿ ಗಾಯಗಳ ಸ್ವರೂಪವನ್ನು ದೃಢಪಡಿಸಲು ವೈದ್ಯಕೀಯ ಸಾಕ್ಷ್ಯ ಮಹತ್ವದ್ದಾಗಿದ್ದು, ಅದರ ಕೊರತೆ ಅಭಿಯೋಜನಾ ಪ್ರಕರಣವನ್ನು ದುರ್ಬಲಗೊಳಿಸುತ್ತದೆ.

25. ತನಿಖಾಧಿಕಾರಿಯು ತಮ್ಮ ಸಾಕ್ಷ್ಯದಲ್ಲಿ ಅಭಿಯೋಜನೆಯ ಪ್ರಕರಣವನ್ನು ಬೆಂಬಲಿಸಿದ್ದಾರೆ. ಅಭಿಯೋಜನೆಯ ಪ್ರಕಾರ ಘಟನೆ ನಡೆದ ಪರಿಣಾಮವಾಗಿ ಫಿರ್ಯಾದಿ ಗಾಯಾಳುವಿನ ಬಲಕಾಲಿಗೆ ಗಂಭೀರ ಗಾಯವಾಗಿ, ಕಾಲಿನ ಮೂಳೆ ಮುರಿದಿದ್ದು, ಮತ್ತು ಎಡ ಮುಂಗೈಗೆ ಸಾಧಾರಣ ಸ್ವರೂಪದ ಗಾಯವಾಗಿ ಅವರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದೆ. ಆದರೆ ವಿಚಾರಣೆಯ ವೇಳೆ ಫ್ರಾಸಾ.1 ಗಾಯಾಳು ನೀಡಿದ ಸಾಕ್ಷ್ಯದಲ್ಲಿ ಆರೋಪಿ ಸ್ವತಃ ದೊಣ್ಣೆಯಿಂದ ಹಲ್ಲೆ ನಡೆಸಿ, ತಮ್ಮ ಕಾಲಿಗೆ ಮತ್ತು ಕೈಗೆ ಒಡೆದಿದ್ದಾನೆಂದು ಹೊಸ ಅಂಶವನ್ನು ಸೇರಿಸಿದ್ದಾರೆ. ಈ ಹೇಳಿಕೆಯು ಪ್ರಥಮವರ್ತಮಾನ ವರದಿ ಮತ್ತು ಅಭಿಯೋಜನೆಯ ಮೂಲ ಪ್ರಕರಣಕ್ಕೆ ವಿರುದ್ಧವಾಗಿದೆ. ಪ್ರಥಮ ವರ್ತಮಾನ ವರದಿಯಲ್ಲಿ ಆರೋಪಿ ಕೇವಲ ಅಲ್ಲಿ ಹಲ್ಲೆ ನಡೆಸುತ್ತಿದ್ದ ಅಪರಿಚಿತ 3 ವ್ಯಕ್ತಿಗಳನ್ನು

ಉತ್ತೇಜಿಸಿದವನಾಗಿ ಮಾತ್ರ ಉಲ್ಲೇಖಗೊಂಡಿದ್ದರೆ, ನಂತರದ ತನಿಖೆ ಹಾಗೂ ವಿಚಾರಣೆಯಲ್ಲಿ ಆರೋಪಿ ನೇರವಾಗಿ ಹಲ್ಲೆ ನಡೆಸಿದವನಾಗಿ ಚಿತ್ರಿಸಲಾಗಿದೆ. ಹೀಗಾಗಿ ಆರೋಪಿ ಪಾತ್ರದ ಕುರಿತು ಅಭಿಯೋಜನೆ ಪ್ರಕರಣದಲ್ಲಿಯೇ ಸ್ಪಷ್ಟವಾದ ವ್ಯತ್ಯಾಸ ಕಂಡುಬರುತ್ತದೆ.

26. ಇನ್ನು, ಪ್ರಥಮ ವರ್ತಮಾನ ವರದಿ ಪ್ರಕಾರ 3 ಅಪರಿಚಿತ ವ್ಯಕ್ತಿಗಳೇ ಮುಖ್ಯವಾಗಿ ಹಲ್ಲೆ ನಡೆಸಿದ್ದು ಕಂಡುಬರುತ್ತದೆ. ತನಿಖಾಧಿಕಾರಿಯವರು 3 ದೊಣ್ಣೆಗಳನ್ನು ಪಂಚನಾಮೆ ಮೂಲಕ ಹೊಸ ಪಡಿಸಿಕೊಂಡಿದ್ದರೂ, ಆ ಅಪರಿಚಿತ ವ್ಯಕ್ತಿಗಳನ್ನು ಪತ್ತೆ ಹಚ್ಚಿ ಅವರ ವಿರುದ್ಧ ದೋಷಾರೋಪಣ ಪತ್ರ ಸಲ್ಲಿಸಿರುವುದಿಲ್ಲ. ಬದಲಾಗಿ ಅವರ ವಿರುದ್ಧದ ಕ್ರಮವನ್ನು ಪಿರ್ಯಾದಿಯೂ ನೀಡಿರುತ್ತಾರೆಂದು ಹೇಳುವ ಮರುಹೇಳಿಕೆ ಆಧಾರದ ಮೇಲೆ ಕೈಬಿಟ್ಟು, ಕೇವಲ ಆರೋಪಿ ವಿರುದ್ಧವೇ ದೋಷಣಪತ್ರ ಸಲ್ಲಿಸಲಾಗಿದೆ. ಫ್ರಾಸಾ.1 ಸಹ ತಮ್ಮ ಸಾಕ್ಷ್ಯದಲ್ಲಿ, ಆ ಅಪರಿಚಿತ ವ್ಯಕ್ತಿಗಳನ್ನು ತಾವು ಗುರುತಿಸಲು ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಆದರಿಂದ ನಿಜವಾದ ಹಲ್ಲೆ ನಡೆಸಿದವರ ಗುರುತು ಹಾಗೂ ಅವರ ಪಾತ್ರದ ಬಗ್ಗೆ ಅಭಿಯೋಜನೆ ಯಾವುದೇ ಸ್ಪಷ್ಟ ಮತ್ತು ವಿಶ್ವಾಸರ್ಹ ಸಾಕ್ಷ್ಯವನ್ನು ಒದಗಿಸಿಲ್ಲ.

27. ಆದರೆ ತನಿಖಾಧಿಕಾರಿಯ ಸಾಕ್ಷ್ಯವು ಸ್ವತಂತ್ರ ಮತ್ತು ಪ್ರತ್ಯಕ್ಷ ಸಾಕ್ಷಕ್ಕೆ ಪರ್ಯಾಯವಾಗುವುದಿಲ್ಲ. ಗಾಯಾಳು/ ದೂರುದಾರರು ತಮ್ಮ ಪ್ರಥಮ ವರ್ತಮಾನ ಹೇಳಿಕೆಯಲ್ಲಿ 3 ಜನ ಅಪರಿಚಿತರು ಆರೋಪಿಯ ಕುಮ್ಮಕ್ಕಿನಿಂದ ದೊಣ್ಣೆಗಳಿಂದ ಹಲ್ಲೆ ಮಾಡಿದ್ದಾರೆ ಎಂದು ಹಾಗೂ ನ್ಯಾಯಾಲಯದ ಮುಂದೆ ನೀಡಿದ ಸಾಕ್ಷ್ಯದಲ್ಲಿ ಆರೋಪಿಯೊಂದಿಗೆ ಇತರ 3 ಜನರು ಸೇರಿ ತಮ್ಮ ಮೇಲೆ ದೊಣ್ಣೆಗಳಿಂದ ಹಲ್ಲೆ ಮಾಡಿದ್ದಾರೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಆದರೆ

ತನಿಖಾಧಿಕಾರಿಯ ಪ್ರಕಾರ ತನಿಖೆಯ ಸಮಯದಲ್ಲಿ ಗಾಯಾಳು/ ದೂರುದಾರರು ನೀಡಿದ್ದ ಎನ್ನಲಾದ ಮರು ಹೇಳಿಕೆ ಆಧಾರದ ಮೇಲೆ ಉಳಿದ 3 ವ್ಯಕ್ತಿಗಳನ್ನು ಬಿಟ್ಟು, ಕೇವಲ ಪ್ರಸ್ತುತ ಆರೋಪಿಯ ವಿರುದ್ಧ ಮಾತ್ರ ದೋಷರೋಪಣ ಪತ್ರ ಸಲ್ಲಿಸಲಾಗಿದೆ. ತನಿಖಾಧಿಕಾರಿಯು ತಮ್ಮ ಸಾಕ್ಷ್ಯದಲ್ಲಿ ಫಾಸ 1 ರವರು ಮರುಹೇಳಿಕೆ ನೀಡಿದ್ದಾನೆಂದು ಹೇಳಿದ್ದಾರೆ. ಆದರೆ ಫಾಸ 1 ರವರು ನ್ಯಾಯಾಲಯದ ಮುಂದೆ ತಾವು ಅಂತಹ ಹೇಳಿಕೆ ನೀಡಿದ ಬಗ್ಗೆ ಸಾಕ್ಷ್ಯ ನೀಡಿಲ್ಲ . ಆದ್ದರಿಂದ ಆ ಮರುಹೇಳಿಕೆಯ ವಿಷಯಗಳನ್ನು ಕೇವಲ ತನಿಕಾಧಿಕಾರಿಯ ಸಾಕ್ಷ್ಯದ ಆಧಾರದ ಮೇಲೆ ಸಾಬೀತಾಗಿದೆ ಎಂದು ಪರಿಗಣಿಸಲು ಸಾಧ್ಯವಿಲ್ಲ. ಪೊಲೀಸ್ ತನಿಖೆಯ ಸಂದರ್ಭದಲ್ಲಿ ದಾಖಲಿಸಲಾದ ಹೇಳಿಕೆಗಳು ಸ್ವತಂತ್ರ ಸಾಕ್ಷ್ಯವಾಗುವುದಿಲ್ಲ. ಅವುಗಳನ್ನು ಕಾನೂನಿನಲ್ಲಿ ಅನುಮತಿಸಲಾದ ಮಿತಿಯೊಳಗೆ ಮಾತ್ರ ಬಳಸಬಹುದಾಗಿದೆ. ಹೇಳಿಕೆಯ ವಿಷಯಗಳನ್ನು ಅವಲಂಬಿಸಬೇಕಾದರೆ, ಅದನ್ನು ನೀಡಿದ ವ್ಯಕ್ತಿಯ ಮೂಲಕ ಸೂಕ್ತ ರೀತಿಯಲ್ಲಿ ಸಾಬೀತುಪಡಿಸಬೇಕಾಗುತ್ತದೆ.

28. ಗಾಯಾಳು ಸಾಕ್ಷ್ಯಕ್ಕೆ ಸಾಮಾನ್ಯವಾಗಿ ಹೆಚ್ಚಿನ ಮಹತ್ವವಿದ್ದರೂ, ಅಂತಹ ಸಾಕ್ಷ್ಯವು ನಂಬಲರ್ಹವಾಗಿದ್ದು ಪ್ರಕರಣದ ಇತರೆ ಸಂದರ್ಭಗಳಿಂದ ಬೆಂಬಲಿತವಾಗಿರಬೇಕು. ಪ್ರಸ್ತುತ ಪ್ರಕರಣದಲ್ಲಿ ಆರೋಪಿ ಪಾತ್ರದ ಬಗ್ಗೆ ಪ್ರಥಮ ಮಾಹಿತಿ ಹೇಳಿಕೆ ಮತ್ತು ನ್ಯಾಯದಲ್ಲಿ ನುಡಿದ ಸಾಕ್ಷ್ಯದ ನಡುವೆ ಇರುವ ವ್ಯತ್ಯಾಸ, ಸ್ವತಂತ್ರ ಸಾಕ್ಷ್ಯಗಳ ಅಭಾವ, ವೈದ್ಯಕೀಯ ಸಾಕ್ಷ್ಯದ ಕೊರತೆ ಹಾಗೂ ಪಂಚನಾಮೆ ಸಾಕ್ಷಿದಾರರ ಪ್ರತಿಕೂಲ ನಿಲುವು ಇವೆಲ್ಲವೂ ಅಭಿಯೋಜನೆ ಪ್ರಕರಣದ ವಿಶ್ವಾಸರ್ಹತೆಯ ಮೇಲೆ ಪರಿಣಾಮ ಬೀರುತ್ತವೆ. ಹೀಗಾಗಿ ಆರೋಪಿಯು

ಫ್ರಾಸ 1 ರವರ ಮೇಲೆ ಹಲ್ಲೆ ಮಾಡಿ ತೀವ್ರ ಸ್ವರೂಪದ ಗಾಯಗಳನ್ನು ಮಾಡಿದ್ದಾರೆ ಅಥವಾ ಇತರರನ್ನು ಪ್ರಚೋದಿಸಿದ್ದಾರೆ ಹಾಗೂ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆಂಬ ಆರೋಪಗಳನ್ನು ಅಭಿಯೋಜನೆಯು ಸಂಶ್ಯಾತೀತವಾಗಿ ಸಾಬೀತುಪಡಿಸುವಲ್ಲಿ ವಿಫಲವಾಗಿದೆ.

29. ಆದರೆ, ಪ್ರಸ್ತುತ ಅಭಿಯೋಜನಾ ಪ್ರಕರಣದಲ್ಲಿ ಅಭಿಯೋಜನೆಯ ಮೌಖಿಕ ಹಾಗೂ ದಾಖಲಾತಿ ಸಾಕ್ಷ್ಯವನ್ನು ಸಮಗ್ರವಾಗಿ ಪರಿಶೀಲಿಸಿದಾಗ ಫ್ರಾಸಾ.1 ರವರಿಗೆ ಗಾಯಗಳಾಗಿರುವುದು ಒಂದು ಮಟ್ಟಿಗೆ ಸಾಬೀತಾಗುತ್ತದೆ. ಆದರೆ, ಆ ಗಾಯಗಳನ್ನು ಆರೋಪಿ ನೇರವಾಗಿ ಉಂಟು ಮಾಡಿದ್ದಾನೆ ಹಾಗೂ ಆರೋಪಿಯೇ ಮುಖ್ಯ ಅಪರಾಧಿ ಎಂಬುದನ್ನು ಸಂಶಯಾತೀತವಾಗಿ ಸಾಬೀತುಪಡಿಸಲು ಅಭಿಯೋಜನೆಯು ವಿಫಲವಾಗಿದೆ. ಫ್ರಾಸಾ.1 ರವರ ಸಾಕ್ಷ್ಯದಲ್ಲಿ ಕಂಡುಬರುವ ಸುಧಾರಣೆಗಳು, ವಿರೋಧಭಾಸಗಳು ಹಾಗೂ ವೈದ್ಯಕೀಯ ಮತ್ತು ತನಿಖಾ ಸಾಕ್ಷ್ಯದಲ್ಲಿರುವ ಕೊರತೆಗಳನ್ನು ಪರಿಗಣಿಸಿದರೆ ಆರೋಪಿಯ ವಿರುದ್ಧದ ಆರೋಪವನ್ನು ಸಂಶಯಾತೀತವಾಗಿ ಸಾಬೀತುಪಡಿಸಲು ಅಭಿಯೋಜನೆಯು ಯಶಸ್ವಿಯಾಗಿಲ್ಲ.

30. ಫ್ರಾಸಾ.1 ಮತ್ತು 2 ರವರ ಸಾಕ್ಷ್ಯದಲ್ಲಿ ವೈರುಧ್ಯತೆಗಳು, ವೈದ್ಯಕೀಯ ಸಾಕ್ಷ್ಯದ ಕೊರತೆ ಮತ್ತು ಸ್ಥಳ ಪಂಚನಾಮೆ ಸಾಕ್ಷಿದಾರರು ಪ್ರತಿಕೂಲ ಸಾಕ್ಷ್ಯ ನುಡಿದಿರುವುದು ಹಾಗೂ ತನಿಖೆಯ ದೋಷಗಳು ಒಟ್ಟಾರೆ ಅಭಿಯೋಜನಾ ಪ್ರಕರಣವನ್ನು ನಂಬಲು ಗಂಭೀರ ಸ್ವರೂಪದ ಅನುಮಾನವನ್ನುಂಟುಮಾಡುತ್ತದೆ. ಆದ್ದರಿಂದ, ನ್ಯಾಯಾಲಯದ ಅಭಿಪ್ರಾಯದಲ್ಲಿ ಅಭಿಯೋಜನೆಯು

ಆರೋಪಿಯ ವಿರುದ್ಧ ಮಾಡಿರುವ ಆರೋಪಗಳನ್ನು ಸಮಂಜಸ ಅನುಮಾನಕ್ಕೆ ಅವಕಾಶವಿಲ್ಲದಂತೆ ಸಾಬೀತುಪಡಿಸಲು ವಿಫಲವಾಗಿದೆ. ಹೀಗಾಗಿ, ಆರೋಪಿಗೆ ಅನುಮಾನದ ಲಾಭ ನೀಡುವುದು ನ್ಯಾಯಸಮ್ಮತವೆಂದು ಭಾವಿಸಿ, ಕಾನೂನು ಪ್ರಕಾರ ಇಂತಹ ಅನುಮಾನ ಇರುವ ಸಂದರ್ಭದಲ್ಲಿ ಆರೋಪಿಗೆ ಅನುಮಾನದ ಲಾಭ ನೀಡಬೇಕು. ಆದ್ದರಿಂದ ಅಭಿಯೋಜನೆಯ ಪ್ರಕರಣದಲ್ಲಿ ಉದ್ಭವಿಸಿದ ಅನುಮಾನದ ಪ್ರಯೋಜನವನ್ನು ಆರೋಪಿಗೆ ನೀಡಿ, ನ್ಯಾಯಾಲಯವು ಅಭಿಯೋಜನೆಯು ಆರೋಪಿ ವಿರುದ್ದ ಮಾಡಿರುವ ಆರೋಪಗಳನ್ನು ನಿಸ್ಸಂಶಯಾತೀತವಾಗಿ ರುಜುವಾತುಪಡಿಸಲು ಅಭಿಯೋಜನೆಯು ವಿಫಲವಾಗಿರುತ್ತದೆ ಎಂದು ತಿಮಾರ್ನಿಸಿ, ಅಂಶ-1 ರಿಂದ 3 ನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

31. <u>ಅಂಶ-4:</u> ಮೇಲ್ಕಂಡಂತೆ ಚರ್ಚಿಸಿ, ಬಂದ ನಿರ್ಣಯದಂತೆ ಈ ಕೆಳಕಂಡಂತೆ ಆದೇಶವನ್ನು ಈ ನ್ಯಾಯಾಲಯವು ಮಾಡಿರುತ್ತದೆ.

## <u>ಆದೇಶ</u>

ದಂಡ ಪ್ರಕ್ರಿಯಾ ಸಂಹಿತೆ ಕಲಂ.248(1) ರಡಿಯಲ್ಲಿ ನ್ಯಾಯಾಲಯವು ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಆರೋಪಿ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.324, 326 ಮತ್ತು 504 ರಡಿಯಲ್ಲಿ ಹೊರಿಸಲಾದ ಆರೋಪಗಳಿಂದ ಆರೋಪಿಯನ್ನು ನಿರ್ದೋಷಿ ಎಂದು ನಿರ್ಣಯಿಸಿ ಬಿಡುಗಡೆಗೆ ಆದೇಶಿಸಲಾಗಿರುತ್ತದೆ.

ಆರೋಪಿ ಮತ್ತು ಅವರ ಜಾಮೀನುದಾರರು ಬರೆದು ಕೊಟ್ಟಿರುವ ಜಾಮೀನಿನ ಮುಚ್ಚಳಿಕೆಗಳು ದಂಡ ಪ್ರಕ್ರಿಯಾ ಸಂಹಿತೆ ಕಲಂ. 437(ಎ)ರಡಿಯಲ್ಲಿ 6 ತಿಂಗಳವರೆಗೆ ಜಾರಿಯಲ್ಲಿರುತ್ತದೆ.

ಮು.ಮಾ-1 ರಿಂದ 4 ಯಾವುದೇ ಬೆಲೆ ಬಾಳದ ವಸ್ತುಗಳಾಗಿರುವುದರಿಂದ ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸಲು ಆದೇಶಿಸಲಾಗಿದೆ.

(ಶ್ರೀಘ್ರಲಿಪಿಗಾರನಿಗೆ ಗಣಕೀಕರಣದ ಮೂಲಕ ನೇರವಾಗಿ ಉಕ್ತಲೇಖನ ನೀಡಿ ತಿದ್ದುಪಡಿ ಮಾಡಿ, ನಂತರ ತೆರೆದ ನ್ಯಾಯಾಲಯದಲ್ಲಿ ಇಂದು ದಿನಾಂಕ 30 ನೇ ಜುಲೈ, 2026 ರಂದು ಘೋಷಿಸಲಾಯಿತು)

SUKANYA C S Digitally signed by SUKANYA C S Date: 2026.08.06 16:05:40 +0530

(ಶ್ರೀಮತಿ. ಸುಕನ್ಯಾ ಸಿ.ಎಸ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಶಿಡ್ಲಘಟ್ಟ

## ಅನುಸೂಚಿ

1. ಅಭಿಯೋಜನೆ ಪರ ವಿಚಾರಣೆ ಮಾಡಲಾದ ಸಾಕ್ಷಿದಾರರ ವಿವರಃ

| | | |
|---|---|---|
| ಫ್ರಾಸಾ-1 | : | ಮುನಿರಾಜಪ್ಪ |
| ಫ್ರಾಸಾ-2 | : | ಮುನಿಲಕ್ಷ್ಮಮ್ಮ |
| ಫ್ರಾಸಾ-3 | : | ಪ್ರಕಾಶ್ |
| ಫ್ರಾಸಾ-4 | : | ಮುನಿರಾಜು |
| ಫ್ರಾಸಾ-5 | : | ಆನಂದ್ |
| ಫ್ರಾಸಾ-6 | : | ಲೋಕೇಶ |
| ಫ್ರಾಸಾ-7 | : | ಪ್ರದೀಪ್ ಪೂಜಾರಿ |

2. ಅಭಿಯೋಜನೆ ಪರ ಗುರುತಿಸಲಾದ ದಾಖಲೆಗಳ ವಿವರಃ

| | | |
|---|---|---|
| ನಿಪಿ-1 | : | ಪ್ರಥಮ ವರ್ತಮಾನ ಹೇಳಿಕೆ |
| ನಿಪಿ-2 | : | ಕೃತ್ಯ ನಡೆದ ಸ್ಥಳದ ಮಹಜರು |
| ನಿಪಿ.3 | : | ಪ್ರಥಮ ವರ್ತಮಾನ ವರದಿ |
| ನಿಪಿ.4 | : | ಮಾಲುಪಟ್ಟಿ |
| ನಿಪಿ.5 | : | ಗಾಯದ ಪ್ರಮಾಣ ಪತ್ರ |

3. ಅಭಿಯೋಜನೆ ಪರ ಗುರುತಿಸಲಾದ ಮುದ್ದೆಮಾಲುಗಳ ವಿವರಃ

ಮುದ್ದೆಮಾಲು- 1 ರಿಂದ 3 - ಮೂರು ನೀಲಗಿರಿ ದೊಣ್ಣೆಗಳು

ಮು.ಮಾ-4 - ಒಂದು ಪಾಲಿಸ್ಟರ್ ಬಟ್ಟೆ

4. ಆರೋಪಿ ಪರ ವಿಚಾರಣೆ ಮಾಡಲಾದ ಸಾಕ್ಷಿದಾರರ ವಿವರ:

ಯಾರೂ ಇಲ್ಲ

5. ಆರೋಪಿ ಪರ ಗುರುತಿಸಲಾದ ದಾಖಲೆಗಳ ವಿವರಃ

ನಿಡಿ-1 ರಿಂದ 4 : 4 ಛಾಯಚಿತ್ರಗಳು

SUKANYA C S Digitally signed by SUKANYA C S Date: 2026.08.06 16:05:48 +0530

(ಶ್ರೀಮತಿ. ಸುಕನ್ಯಾ ಸಿ.ಎಸ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಶಿಡ್ಲಘಟ್ಟ.